# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/75/2017/ಎಆರ್‌ಇ-8

ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ:26.08.2022.

## :: ವಿಚಾರಣಾ ವರದಿ ::

ಉಪಸ್ಥಿತರು: ರಾಜಶೇಖರ.ವಿ.ಪಾಟೀಲ
ಅಪರ ನಿಬಂಧಕರು ವಿಚಾರಣೆಗಳು-8,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ವಿಷಯ: ಶ್ರೀಮತಿ ಭಾರತಿ ಬಾಯಿ, ಅಂಗನವಾಡಿ ಮೇಲ್ವಿಚಾರಕಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ:

1.ಕಂಪ್ಲೇಂಟ್/ಉಪಲೋಕ್/ಬಿಡಿ/5195/2012/ಎಆರ್‌ಇ-6 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 23.07.2016.

2.ಸರ್ಕಾರದ ಆದೇಶ ಸಂಖ್ಯೆ:ಮಮಇ 301 ಎಸ್‌ಜಿಡಿ 2016 ಬೆಂಗಳೂರು, ದಿನಾಂಕ:12.01.2017

3.ನಾಮನಿರ್ದೇಶನ ಸಂಖ್ಯೆ:ಉಪಲೋಕ್-2/ಡಿಇ-75/2017 ಬೆಂಗಳೂರು, ದಿನಾಂಕ:18.01.2017

*****

1. ಪ್ರಸ್ತುತ ದೂರನ್ನು ದೂರುದಾರರಾದ ಶ್ರೀ.ವಿ.ನಾಗರಾಜ ತಂದೆ ಶ್ರೀ.ವಿದ್ಯಾರಣ್ಯಪ್ಪ, ಮುದ್ದೇರಿ ಗ್ರಾಮ, ಕುಪ್ಪಂಪಾಳ್ಯ ಪೋಸ್ಟ್, ತಯಲೂರು ಹೋಬಳಿ, ಮುಳಬಗಿಲು ತಾಲ್ಲೂಕು, ಕೋಲಾರ ಜಿಲ್ಲೆ ರವರು ಆಸನಾ ಶ್ರೀಮತಿ ಭಾರತಿ ಬಾಯಿ, ಅಂಗನವಾಡಿ

ಮೇಲ್ವಿಚಾರಕಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧ ಸಲ್ಲಿಸಿರುತ್ತಾರೆ.

2. ದೂರುದಾರರು ವಿ.ನಾಗರಾಜ ತಂದೆ ವಿದ್ಯಾರಣ್ಯಪ್ಪ ಮದ್ದೇರಿ ಗ್ರಾಮ ಮುಳಬಾಗಿಲು ತಾಲ್ಲೂಕು ಕೋಲಾರ ಜಿಲ್ಲೆ ಇವರು ಆಸನೌ ಶ್ರೀಮತಿ ಭಾರತಿ ಬಾಯಿ ಮೇಲ್ವಿಚಾರಕಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಳಬಾಗಿಲು ತಾಲ್ಲೂಕು ಕೋಲಾರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಹೊಸಳ್ಳಿ ಗ್ರಾಮ ಅಂಗನವಾಡಿ ಗ್ರಾಮದಲ್ಲಿ ಕೇವಲ 2 ಮಕ್ಕಳು ಹಾಜರಿ ಇದ್ದು ವಿದ್ಯಾ ಸೌಲಭ್ಯಗಳನ್ನು ಪಡೆಯುತ್ತಿದ್ದು, ಆದರೆ ಸದರಿ ಅಂಗಡಿವಾಡಿಯ ಶಿಕ್ಷಕರು ಮತ್ತು ಸಿಬ್ಬಂದಿಗಳು ಮಕ್ಕಳ ಹಾಜರಿ ಪುಸ್ತಕದಲ್ಲಿ ಸುಮಾರು 25 ಮಕ್ಕಳು ಅಂಗನವಾಡಿಯಲ್ಲಿ ಹಾಜರಿದ್ದು ವಿದ್ಯಾಭ್ಯಾಸದ ಸೌಲಭ್ಯ ಮತ್ತು ಪೌಷ್ಟಿಕ ಆಹಾರ ಪಡೆಯುತ್ತಿದ್ದಾರೆಂದು ಸುಳ್ಳು ಹಾಜರಿ ಪುಸ್ತಕವನ್ನು ಸೃಷ್ಟಿಸಿ ಅಂಗನವಾಡಿ ಕಾರ್ಯಕತೆ ಶ್ರೀಮತಿ ರಂಗಮ್ಮ ಸರಿಯಾಗಿ ಮಾಹಿತಿ ನೀಡದೇ ಆಸನೌರವರೊಂದಿಗೆ ಶಾಮೀಲಾಗಿ ಮಕ್ಕಳಿಗೆ ಸೌಲಭ್ಯ ವಂಚನೆ ಮಾಡಿದ್ದಾರೆಂದು ಅದು ಅಲ್ಲದೇ ಸದರಿ ಹೊಸಳ್ಳಿ ಗ್ರಾಮ ಪಂಚಾಯಿತಿ ಅಂಗನವಾಡಿ ಮೇಲ್ವಿಚಾರಣೆ ಮಾಡಿ ಆಸನೌ ಇವರ ಕಾರ್ಯವ್ಯಾಪ್ತಿಯಲ್ಲಿ ಬರುತ್ತಿದ್ದು ಸುಳ್ಳಾಗಿ ಹೆಚ್ಚು ಮಕ್ಕಳ ಹಾಜರಾತಿಯನ್ನು ಮಾಡಿ ಆಹಾರ ಪೂರೈಕೆ ಸೌಲಭ್ಯಗಳನ್ನು ಪಡೆಯಲು ತಮ್ಮ ಕರ್ತವ್ಯವನ್ನು ಜವಾಬ್ದಾರಿಯುತವಾಗಿ ಉಸ್ತುವಾರಿ ಮಾಡದೇ ಮತ್ತು ಕಾಲಕಾಲಕ್ಕೆ ಅಂಗನವಾಡಿಗೆ ಭೇಟಿ ನೀಡಿ ಲೆಕ್ಕ ಪತ್ರಗಳನ್ನು ಪರಿಶೀಲಿಸದೇ ಕೇವಲ ಇಬ್ಬರೂ ಮಕ್ಕಳೂ ಮಾತ್ರ ಹಾಜರಿದ್ದು 25 ಮಕ್ಕಳು ಹಾಜರಾಗಿದ್ದಾರೆಂದು ದಾಖಲೆಗಳನ್ನು ಸುಳ್ಳಾಗಿ ಸೃಷ್ಟಿಸಿ ದಾಖಲೆಗಳನ್ನು ಪರಿಶೀಲಿಸದೇ ಕರ್ತವ್ಯ ಲೋಪವೆಸಗಿದ ಕಾರಣ ಮಕ್ಕಳಿಗೆ ಸೌಲಭ್ಯ ವಂಚನೆ ಆಗಿದೆ ಎಂದು ಆರೋಪ ಮಾಡಿದ್ದಾರೆ.

3. ಪ್ರಾಥಮಿಕ ತನಿಖೆ ಕಾಲಕ್ಕೆ ಲೋಕಾಯುಕ್ತ ಸಂಸ್ಥೆಯ ವತಿಯಿಂದ ಕೋಲಾರ ಜಿಲ್ಲೆಯ ಲೋಕಾಯುಕ್ತ ಪೊಲೀಸ್ ಕಚೇರಿಯಿಂದ ಕರ್ತವ್ಯ ಲೋಪದ ಬಗ್ಗೆ ತನಿಖೆ ಮಾಡಿ ವರದಿ ಪಡೆದುಕೊಂಡಿದ್ದು ಅಂದಿನ ಪೊಲೀಸ್ ನಿರೀಕ್ಷಕರು ಲೋಕಾಯುಕ್ತ ಕೋಲಾರ ರವರು ದಿನಾಂಕ:15.06.2012 ರಂದು ವರದಿ ಸಲ್ಲಿಸಿದ್ದಾರೆ.

Rec 20/8/20

4. ಸದರಿ ದೂರುದಾರರ ದೂರು ಅರ್ಜಿ ಆಧಾರದಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆ ತನಿಖೆ ಮಾಡಿ ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ12(3) ರಡಿಯಲ್ಲಿ ಉಲ್ಲೇಖ(1) ರಲ್ಲಿ ಕಾಣಿಸಿದಂತೆ ದಿನಾಂಕ 23.07.2016 ರಂದು ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ(2) ರಲ್ಲಿ ದಿ:12.01.2017 ರಂದು ಉಲ್ಲೇಖಿಸಿದ್ದಾರೆ. ಅದರ ಆಧಾರದಲ್ಲಿ ಮಾನ್ಯ ಲೋಕಾಯುಕ್ತ ರವರು ದಿನಾಂಕ: 18.01.2017 ರಂದು ಅಪರ ನಿಬಂಧಕರು (ವಿಚಾರಣೆಗಳು)-8 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

5. ನಾಮನಿರ್ದೇಶನದಂತೆ ಆಪಾದಿತ ಸರ್ಕಾರಿ ನೌಕರ ಶ್ರೀಮತಿ ಭಾರತಿ ಬಾಯಿ, ಅಂಗನವಾಡಿ ಮೇಲ್ವಿಚಾರಕಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧ ಅಪರ ನಿಭಂಧಕರು (ವಿಚಾರಣೆಗಳು)-8 ರವರು ದೋಷಾರೋಪಣಾ ಪಟ್ಟಿಯನ್ನು ರಚಿಸಿದ್ದು, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 21/02/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ANNEXURE No.I**
**CHARGE**

6. That, you – DGO while working as Supervisor in the office of Child Development Project Office at Mulabagilu in Kolar failed to visit and inspect Anganwadi centres coming within the jurisdiction and monitor proper use of nutritious food products supplied for the benefit of the children attending anganwadi centres and thereby you DGO have failed to maintain absolute integrity and devotion to duty, the act of which is unbecoming of public/Government Servant and thereby you – DGO have committed misconduct as enumerated under Rule 3(1)(i),

(ii) and (iii) of Karnataka Civil Services(Conduct) Rules, 1966.

**ANNEXURE No.II**
**STATEMENT OF IMPUTATIONS OF MISCONDUCT**

7. On the complaint filed by Sri.V.Nagaraja S/o Vidyaranyappa R/o Madderi village, Kuppampalya post, Tayalur Hobli, Mulabagilu Taluk, Kolar District (hereinafter referred to as 'complainant' for short) against Sri.H.M.Rudresh – Child Development Project Officer, Mulabagilu Taluk, Kolar District alleging that he being public/Government servant, has committed misconduct, an investigation was taken up under section 9 of the Karnataka Lokayukta Act, 1984.
8. According to the complainant: Only two children are attending the Anganwadi school at K.Hosahalli village. Sri.H.M.Rudresh and the teacher of Anganwadi school have been showing false attendance of 25 children and are availing the benefit of 23 students for themselves.
9. After taking up the investigation, Superintendent of Police, Karnataka Lokayukta at Kolar was asked to investigate and submit report regarding the allegations. S.P. in turn got conducted the investigation from Sri.S.Manjunath – Police Inspector, Karnataka Lokayukta at Kolar (hereinafter referred to as Investigating Officer, I.O. No.1 for short). The I.O. has submitted his report dated 16/8/2012 wherein he has stated Sri.H.M.Rudresh was responsible for not properly supervising the anganwadi by

Ree 26/8/2022

making periodical visits on account of which nutritious food product supplied to Anganwadi was misused.

10. Further, investigation was taken up in the matter and S.P, Karnataka Lokayukta, Kolar was asked to submit further report regarding the role of Smt.Bharathi Bai in the misue of food products supplied to Anganwadi. S.P. in turn got conducted the investigation from Sri.Munikrishna, Police Inspector, Karnataka Lokayukta at Kolar (hereinafter referred to as Investigating Officer, I.O. No.2 for short). He has submitted report dated 20/11/2015 wherein he has stated it was the duty of Smt.Bharati Bai as supervisor to visit and inspect Anganwadi centres and monitor proper use of supply of nutritious food products to Anganwadi centers and she failed in her duties and obligations.

11. Copies of both investigation reports were sent to the DGO for her reply. DGO submitted her reply which is not convincing to drop the proceedings.

12. A careful consideration of the material on record shows that:

    i. DGO-Smt.Bharati Bai while working as Supervisor in the office of Child Development Project Office at Mulabagilu in Kolar was required to visit and inspect anganwadi centers coming within the jurisdiction and monitor proper use of nutritious food products supplied for the benefit of the children attending anganwadi centers.

    ii. She had failed in her duty as a result of which nutritious food products supplied to Anganwadi school

at K.Hosahalli village in Mulabagilu Taluk for the benefit of 25 children has been misused since only two children were attending the said anganwadi center.

13. Since the said facts and materials on record prima facie show that DGO has committed misconduct under Rule 3(1)(i) (ii) and (iii) of KCS (Conduct) Rules 1966, recommendation is made under section 12(3) of Karnataka Lokayukta Act, 1984 to the Competent Authority to initiate Disciplinary Proceedings against the DGO under Rule 14-A of K.C.S. (CCA) Rules, 1957. Accordingly, the Competent Authority initiated Disciplinary Proceedings against the DGO and entrusted the enquiry to the Hon'ble Upalokayukta under Rule 14-A of KCS(CCA) Rules. Hence, the charge.

14. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ ಆಫ್ ಚಾರ್ಜಸ್) ಆಸನೌ ರವರಿಗೆ ಕಳುಹಿಸಿದ್ದು, ಸದರಿ ಆಪಾದಣೆ ಪ್ರತಿ ಆಸನೌ ರವರಿಗೆ ಜಾರಿಯಾಗಿ ಆಸನೌ ರವರು ದಿನಾಂಕ 14.06.2018 ರಂದು ಹಾಜರಾಗಿದ್ದು, ಆಸನೌ ರವರು ಪ್ರಥಮ ಮೌಖಿಕ ಹೇಳಿಕೆ ನಿಯಮ-11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

15. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

16. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

17. ಆಸನೌ ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ತಮ್ಮ ಆಕ್ಷೇಪಣೆಯಲ್ಲಿ ಪಿರ್ಯಾದಿದಾರರು ಮಾಡಿರುವ ಎಲ್ಲಾ ಆರೋಪಗಳನ್ನು ಅಲ್ಲಗಳೆದು ತಾವು ತಮ್ಮ ಕರ್ತವ್ಯ ಸಮಯದಲ್ಲಿ ಸಮಯ ಸಮಯಕ್ಕೆ ಎಲ್ಲಾ ಅಂಗನವಾಡಿ ಶಾಖೆಗಳಿಗೆ ಭೇಟಿ ನೀಡಿ ಸೂಕ್ತ ಮೇಲ್ವಿಚಾರಣೆ ಮಾಡಲಾಗಿದೆ ಮತ್ತು ಅಂಗನವಾಡಿಯಲ್ಲಿ ಹೊಸದಾಗಿ

ಹುಟ್ಟಿದ ಮಕ್ಕಳ ಹೆಸರುಗಳು, ಬಾಣಂತಿಯರು, ಗರ್ಭಿಣಿಯರು, 12 ತಿಂಗಳಿಂದ 6 ವರ್ಷದ ಮಕ್ಕಳ ಹಾಜರಿಯನ್ನು ಪುಸ್ತಕದಲ್ಲಿ ನಮೂದು ಮಡಲಾಗುತ್ತದೆ. 3 ವರ್ಷದ ಒಳಗಿನ ಮಕ್ಕಳಿಗೆ ಆಹಾರವನ್ನು ಅಂಗನವಾಡಿಯ ಮನೆಗೆ ಪೂರೈಕೆ ಮಾಡುತ್ತಿದ್ದು ಮತ್ತು ಪಾಲಕರು ಅಂಗನವಾಡಿಗೆ ಮಕ್ಕಳನ್ನು ತಾವೇ ಕರೆದುಕೊಂಡು ಬಂದು ಹೋಗುತ್ತಾರೆ. ಅಂಗನವಾಡಿಯಲ್ಲಿ ನಮೂದು ಮಾಡಿದ ಮಕ್ಕಳ ಹಾಜರಾಗಿ ಪುಸ್ತಕವನ್ನು ನಿಯಮಿತವಾಗಿ ಇಟ್ಟಿದ್ದು ಮತ್ತು ತಾವು ಪರಿಶೀಲಿಸಿದ್ದು ಮತ್ತು ಹಾಜರಾತಿ ಮಕ್ಕಳ ಸಂಖ್ಯೆಗೂ ಮತ್ತು ಆಹಾರ ಪೂರೈಕೆ ಮಾಡಿದ ಗುಣಮಟ್ಟ ತಾಳೆ ಆಗುತ್ತಿದ್ದು ತಾವು ಯಾವುದೇ ಕರ್ತವ್ಯ ಲೋಪವೆಸಗಿಲ್ಲ ಎಂದು ಆಕ್ಷೇಪಣೆ ಮಾಡಿದ್ದಾರೆ.

18. ಮುಂದುವರೆದು ಕನಾಟಕ ಸರ್ಕಾರ ತಮ್ಮ ಅಧಿಸೂಚನೆ ಸಂಖ್ಯೆ.ಮಮಇ. 128 ಎಸ್‌ಜೆಡಿ 2013 ದಿನಾಂಕ 12.03.2015 ರಂದು ಅಂಗನವಾಡಿ ಉಸ್ತುವಾರಿಗೆ ಸಂಬಂಧಿಸಿದ ರುದ್ರೇಶ ಎನ್ನುವವರ ಮೇಲೆ ಈ ಮೊದಲೇ ಇಲಾಖಾ ತನಿಖೆಯನ್ನು ಕೈಗೊಂಡಿದ್ದು ಅದರಲ್ಲಿ ಆಸನೌ ರವರನ್ನು ಆಸನೌ ಆಗಿ ಮಾಡಿದ್ದರೂ, ಸದರಿ ಅಧಿಸೂಚನೆಯಲ್ಲಿ ಆಸನೌ ಎಂ.ಭಾರತಿ ಮೇಲೆ ಮೇಲ್ವಿಚಾರಕಿ ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿ ಸಲ್ಲಿಸದೇ ವಿಚಾರಣೆಯಲ್ಲಿ ಹಿಂಪಡೆಯಲು ನಿರ್ಧರಿಸಿದ ಆಧಾರದಲ್ಲಿ ಮೇಲಿನ ಅಧಿಸೂಚನೆಯನ್ನು ಸರ್ಕಾರ ಆದೇಶ ಸಂಖ್ಯೆ.ಮಮಇ. 128 ಎಸ್‌ಜೆಡಿ 2013 ದಿನಾಂಕ 12.03.2015 ರಂದು ಆದೇಶ ಹೊರಡಿಸಲಾಗಿದೆ. ಆದ್ದರಿಂದ ಈ 2ನೇ ವಿಚಾರಣೆಯನ್ನು ಕೈಗೊಳ್ಳುವುದು ಸೂಕ್ತವಲ್ಲವೆಂದು ಆಕ್ಷೇಪಣೆ ಸಲ್ಲಿಸಿದ್ದಾರೆ. ಈ ಮೇಲಿನ ಕಾರಣಗಳಿಂದ ಪ್ರಸ್ತುತ ವಿಚಾರಣೆಯನ್ನು ಮುಂದುವರೆಸದೇ ಕೈ ಬಿಡಬೇಕೆಂದು ಕೇಳಿಕೊಂಡಿದ್ದಾರೆ.

19. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ಪ್ರಾ.ಸ.1 ಎಂದು ಸಾಕ್ಷ್ಯ ಹಾಜರುಪಡಿಸಿ ತಮ್ಮ ಪರವಾಗಿ, ನಿ.ಪಿ.1 ರಿಂದ ನಿ.ಪಿ.5 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಮತ್ತು ಪ್ರಾ.ಸ.2 ತನಿಖಾಧಿಕಾರಿಗಳ ಸಾಕ್ಷ್ಯ ಹಾಜರುಪಡಿಸಿ ತಮ್ಮ ಪರವಾಗಿ, ನಿ.ಪಿ.6 ಎಂದು ದಾಖಲಾತಿಯನ್ನು ಗುರುತುಪಡಿಸಿಕೊಂಡಿರುತ್ತಾರೆ. ಮಂಡನಾಧಿಕಾರಿಗಳ ವಿಚಾರಣೆ ಅಂತ್ಯಗೊಂಡ ನಂತರ ಎದುರುದಾರರ ಎಸ್.ಓ.ಎಸ್ ಹೇಳಿಕೆಯನ್ನು ದಾಖಲ ಮಾಡಿಕೊಳ್ಳಲಾಗಿದ್ದು

ಸದರಿಯವರು ತಮ್ಮ ಪರವಾಗಿ ಸಾಕ್ಷಿ ಇದೆ ಎಂದ ಕಾರಣ ಪ್ರಕರಣವನ್ನು ಆಸನೌ ರವರ ಸಾಕ್ಷಿಗಾಗಿ ಮುಂದೂಡಲಾಯಿತು.

20. ಆಸನೌ ರವರು ತಮ್ಮ ಪರವಾಗಿ ತಮ್ಮ ಸಾಕ್ಷ್ಯವನ್ನು ಡಿಡಬ್ಲ್ಯೂ-1 ಎಂದು ಅಲ್ಲದೇ ತಮ್ಮ ಪರವಾಗಿ ನಿ.ಡಿ.1 ರಿಂದ ನಿ.ಡಿ.5 ರವರೆಗೆ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

21. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಆಲಿಸಲಾಯಿತು. ಮಂಡನಾಧಿಕಾರಿಯವರು ವಾದವನ್ನು ಮೌಖಿಕವಾಗಿ ಮಂಡಿಸಿರುತ್ತಾರೆ. ಆಸನೌ ರವರು ತಮ್ಮ ಲಿಖಿತ ವಾದವನ್ನು ಸಲ್ಲಿಸಿರುತ್ಥಾರೆ. ಮಂಡನಾಧಿಕಾರಿಗಳ ವಾದವನ್ನು ಆಲಿಸಿ ಪ್ರಕರಣವನ್ನು ಅಂತಿಮ ತೀರ್ಪಿಗಾಗಿ ಮುಂದೂಡಲಾಯಿತು.

22. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1: ವಿಚಾರಣಾ ಪ್ರಾಧಿಕಾರವು ಆಸನೌ ಭಾರತಿಬಾಯಿ ರವರು ಮೇಲ್ವಿಚಾರಕಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಳಬಾಗಿಲು ತಾಲ್ಲೂಕು ಕೋಲಾರ ಜಿಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಹೊಸಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಹೆಚ್ಚು ಮಕ್ಕಳ ಸಂಖ್ಯೆ ಹಾಜರಾತಿಯನ್ನು ತಯಾರಿಸಿ ಮಕ್ಕಳ ಆರೈಕೆ ಮತ್ತು ಪೌಷ್ಟಿಕ ಆಹಾರ ಸಾಮಗ್ರಿಗಳನ್ನು ಪೂರೈಸಿದ ಬಗ್ಗೆ ತಮ್ಮ ಸಿಬ್ಬಂದಿಗೆ ಜವಾಬ್ದಾರಿಯುತ ಮೇಲ್ವಿಚಾರಣೆ ಮಾಡುವಲ್ಲಿ ಕರ್ತವ್ಯ ಲೋಪ ಲೋಪವೆಸಗಿದ್ದಾರೆ ಎಂದು ಆಪಾದಿಸಲಾದ ಆರೋಪಗಳನ್ನು ಸಾಬೀತುಪಡಿಸಿದ್ದಾರೆಯೇ?**

**ಅಂಶ–2: ಆದೇಶವೇನು?**

23. ಕಡತವನ್ನು ಪರಿಶೀಲಿಸಲಾಯಿತು, ಲಭ್ಯವಿರುವ ಮೌಖಿಕ ಮತ್ತು ಲಿಖಿತ ದಾಖಲೆ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

24. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕರಾತ್ಮಕ**
**ಅಂಶ 2: ಅಂತಿಮ ಆದೇಶದಂತೆ.**

:: **ಕಾರಣಗಳು** ::

25. **ಅಂಶ 1:**

26. ಮಂಡನಾಧಿಕಾರಿಗಳು ಆಸನೌ ರವರ ಮೇಲೆ ಮಾಡಿದ ಪ್ರಾ.ಸ.1 ರವರ ಆರೋಪಗಳನ್ನು ಸಾಬೀತುಪಡಿಸಲು ಪ್ರಾ.ಸ.1 ದೂರುದಾರರ ಸಾಕ್ಷ್ಯವನ್ನು ಹಾಜರುಪಡಿಸಿದ್ದಾರೆ ಮತ್ತು ಅವರ ಮುಖಾಂತರ ಅವರ ಪರವಾಗಿ ನಿ.ಪಿ-1 ರಿಂದ ನಿ.ಪಿ-5 ರವರೆಗೆ ದಾಖಲೆಗಳನ್ನು ಗುರುತು ಹಾಕಿಸಿಕೊಂಡಿದ್ದಾರೆ.

27. ಪ್ರಾ.ಸ -1 ದೂರುದಾರರು ತಮ್ಮ ಮೌಖಿಕ ಸಾಕ್ಷ್ಯವನ್ನು ಆಸನೌ ರವರು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಹೊಸಳ್ಳಿ ಗ್ರಾಮ ಮೇಲ್ವಿಚಾರಕಿ ಆಗಿದ್ದು ತಮ್ಮ ಮುಳಬಾಗಿಲು ತಾಲ್ಲೂಕಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮೇಲ್ವಿಚಾರಕಿ ಅಧಿಕಾರಿ ಆಗಿದ್ದು ಹೊಸಳ್ಳಿ ಅಂಗನವಾಡಿ ಕೇಂದ್ರ ಅವರ ಮೇಲ್ವಿಚಾರಣಾ ವ್ಯಾಪ್ತಿಯಲ್ಲಿ ಬರುತ್ತಿದ್ದರೂ ಸದರಿ ಅಂಗನವಾಡಿ ಕೇಂದ್ರದಲ್ಲಿ 2 ಅಥವಾ 3 ಮಕ್ಕಳು ಮಾತ್ರ ಶಿಕ್ಷಣ ಅಥವಾ ಪೌಷ್ಟಿಕ ಆಹಾರ ಇತರೆ ಸೌಲಭ್ಯ ಪಡೆಯಲು ದಾಖಲಾಗಿದ್ದರೂ ಅಂಗನವಾಡಿ ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆ ರಂಗಮ್ಮ ಎನ್ನುವವರು ಸುಮಾರು 25 ಮಕ್ಕಳು ಅಂಗನವಾಡಿ ಕೇಂದ್ರಕ್ಕೆ ವಿದ್ಯಾಭ್ಯಾಸಕ್ಕಾಗಿ ಹಾಜರಿರುತ್ತಿದ್ದಾಗಿ ಸುಳ್ಳು ಹಾಜರಿ ಪುಸ್ತಕ ತೋರಿಸಿ ಮೇಲಾಧಿಕಾರಿ ಆಸನೌ ಭಾರತಿ ಬಾಯಿರವರಿಗೆ ಸರಿಯಾಗಿ ಮಾಹಿತಿ ನೀಡದೇ 25 ಸುಳ್ಳು ವಿದ್ಯಾರ್ಥಿಗಳ ಪೌಷ್ಟಿಕ ಆಹಾರ ಪಡೆದು ದುರ್ಬಳಕೆ ಮಾಡಿಕೊಂಡು ಸರ್ಕಾರಕ್ಕೆ ವಂಚನೆ ಮಾಡಿ ಅರ್ಹ ಮಕ್ಕಳಿಗೆ ಪೂರೈಸಬೇಕಾದ ಆಹಾರ ಪದಾರ್ಥದಿಂದ ಸೌಲಭ್ಯ ವಂಚನೆ ಮಾಡಿದ್ದಾರೆಂದು ಸಾಕ್ಷ್ಯ ನುಡಿದು ಈ ಬಗ್ಗೆ ಲೋಕಾಯುಕ್ತ ಕಚೇರಿಗೆ ದೂರು ಸಲ್ಲಿಸಿದ್ದೇನೆ ಮತ್ತು ತಮ್ಮ ಪರವಾಗಿ ನಿ.ಪಿ-1 ರಿಂದ ನಿ.ಪಿ-3 ದೂರುಗಳನ್ನು ಗುರುತು ಹಾಕಿಸಿಕೊಂಡಿದ್ದೇನೆ ಹಾಗೂ ಮಾಹಿತಿ ಮತ್ತು ಹಕ್ಕು ಅಧಿನಿಯಮದಡಿಯಲ್ಲಿ ತಾವು ಪಡೆದುಕೊಂಡ ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿ.ಪಿ-4 ಮತ್ತು ನಿ.ಪಿ-5 ಗುರುತು ಹಾಕಿಸಿಕೊಳ್ಳಲಾಗಿದೆ.

28. ಆಸನೌ ರವರು ತಾವು ಸಲ್ಲಿಸಿದ ಆಕ್ಷೇಪಣೆಗಳಿಗುವಾಗಿ ಪಾಟೀ ಸವಾಲನ್ನು ಕೈಗೊಂಡಿದ್ದು, ಪಾಟೀ ಸವಾಲನ್ನು ಹಾಜರಾತಿ ಪುಸ್ತಕದಲ್ಲಿ ಹೊಸದಾಗಿ ಹುಟ್ಟಿದ ಮಗುವಿನ ಹೆಸರು, ಬಾಣಂತಿಯರು ಮತ್ತು ಗರ್ಭಿಣಿಯರು, 1 ರಿಂದ 6 ಮಕ್ಕಳ ಹಾಜರಾತಿ ಪುಸ್ತಕದಲ್ಲಿ ನಮೂದಾಗುತ್ತದೆ ಗರ್ಭಿಣಿಯರು, ಬಾಣಂತಿಯರು ಮತ್ತು 3 ವರ್ಷದ ಒಳಗಿನ ಮಕ್ಕಳಿಗೆ ಆಹಾರವನ್ನು ಅಂಗನವಾಡಿಯಿಂದ ಸರಬರಾಜು

ಮಾಡುತ್ತಾರೆಂದು ಮತ್ತು ಮಕ್ಕಳನ್ನು ಪಾಲಕರೇ ಅಂಗನವಾಡಿ ಕೇಂದ್ರಕ್ಕೆ ಕರೆದುಕೊಂಡು ಬಂದು ಹೋಗುತ್ತಾರೆ ಎಂದು ಪ್ರಾ.ಸ-1 ರವರು ತಮ್ಮ ದೂರಿನಲ್ಲಿ ಯಾವ ದಿನಾಂಕದಂದು ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ್ದೆ ಮತ್ತು ಯಾವ ಹಾಜರಿ ಪುಸ್ತಕವನ್ನು ಪರಿಶೀಲಿಸಿದ್ದೆ ಎಂದು ನೆನಪಿಲ್ಲ ಎಂಬ ವಿಷಯವನ್ನು ವ್ಯಕ್ತಪಡಿಸಿಕೊಂಡಿದ್ದಾರೆ ಮತ್ತು ಆ ಸಂದರ್ಭದಲ್ಲಿ ರಂಗಮ್ಮ ಎನ್ನುವ ಅಂಗನವಾಡಿ ಕಾರ್ಯಕರ್ತೆ ಉಸ್ತುವಾರಿ ಇದ್ದರೆಂದು ಒಪ್ಪಿಕೊಂಡಿದ್ದಾರೆ.

29. ಮಂಡನಾಧಿಕಾರಿಗಳು ತಮ್ಮ ಆರೋಪ ಸಾಬೀತುಪಡಿಸಲು ಲೋಕಾಯುಕ್ತ ಸಂಸ್ಥೆಯಿಂದ ನೇಮಕಗೊಂಡ ತನಿಖಾಧಿಕಾರಿಯವರ ಸಾಕ್ಷ್ಯವನ್ನು ಹಾಜರು ಪಡಿಸಿದ್ದು ಸದರಿಯವರು ಸದರಿ ತನಿಖೆಯಲ್ಲಿ ಮಂಜುನಾಥ ಇನ್ಸ್‌ಪೆಕ್ಟರ್ ತನಿಖೆಯಲ್ಲಿ ಅವರು ಹೊಸಳ್ಳಿ ಅಂಗನವಾಡಿಗೆ ಭೇಟಿ ನೀಡಿ ಮಕ್ಕಳ ಹಾಜರಾತಿ ಪುಸ್ತಕ ಪರಿಶೀಲನೆ ಮಾಡಿದಾಗ ಕೆಲಸದ ಒತ್ತಡದಿಂದ ದಾಖಲೆಗಳನ್ನು ತಾಲ್ಲೂಕು ಕಚೇರಿಗೆ ಕಳುಹಿಸಿಲ್ಲ. ಆಸನೌ ರವರು ಆಹಾರ ಪೂರೈಕೆಯ ಜವಾಬ್ದಾರಿ ತಮ್ಮ ಉಸ್ತುವಾರಿಯಲ್ಲಿ ಬರುತ್ತದೆ ಎಂದು ನುಡಿದಿದ್ದು ತಮ್ಮ ವರದಿಯನ್ನು ನಿ.ಪಿ-6 ಎಂದು ಗುರುತು ಹಾಕಿಸಿಕೊಂಡಿದ್ದಾರೆ.

30. ಪ್ರಾ.ಸ -2 ಅಂದಿನ ಅಧೀಕ್ಷಕರಾಗಿದ್ದು ತಾವು ಪ್ರಭಾರಿ ಪಡೆದಾಗ ಮುಂದಿನ ಪೊಲೀಸ್ ಅಧೀಕ್ಷಕರು ವರದಿ ಸಲ್ಲಿಸಿದ್ದು ಹೆಚ್ಚಿನ ತನಿಖೆಯನ್ನು ನಾಗರಾಜ ಎಂಬುವವರು ಅಂಗನವಾಡಿ ಕಾರ್ಯಕರ್ತೆ ರಂಗಮ್ಮ ರವರು ಹಾಜರಾತಿ ಪುಸ್ತಕಗಳ ಉಸ್ತುವಾರಿ ಇಟ್ಟುಕೊಂಡಿದ್ದು ಆಹಾರ ಧಾನ್ಯಗಳ ಪೂರೈಕೆಯಲ್ಲಿ ಅನಿಯಮಿತ ಕಂಡು ಬಂದಿದೆ ಎಂದು ಉಲ್ಲೇಖ ಮಾಡಿದ್ದಾರೆ ಎಂದರೆ ಪ್ರಾ.ಸ-2 ರವರು ಖುದ್ದಾಗಿ ತನಿಖೆ ಕೈಗೊಳ್ಳದೇ ಇರುವುದು ಕಂಡು ಬರುತ್ತಿದೆ.

31. ಪ್ರಾ.ಸ.2 ರವರ ಪಾಟೀ ಸವಾಲನ್ನು ಗಮನಿಸಿದಾಗ ಸದರಿ ಅಂಗನವಾಡಿಯ ಮೇಲ್ವಿಚಾರಕರು ರುದ್ರೇಶ ರವರು ಸಿಡಿಪಿಓ ಆಗಿದ್ದು, ಇದೇ ಸ್ವರೂಪದ ಆರೋಪದ ಮೇಲೆ ಇನ್ನೊಂದು ವಿಚಾರಣೆ ಲೋಕಾಯುಕ್ತ ಸಂಸ್ಥೆಯಲ್ಲಿ ನಡೆಯುತ್ತಿದ್ದು, ಅದರಲ್ಲಿ ಅಂಗನವಾಡಿ ಕಾರ್ಯಕರ್ತೆ ರಂಗಮ್ಮ ಕೂಡಾ ಆಪಾದಿತರಾಗಿದ್ದಾರೆಂದು ಒಪ್ಪಿಕೊಂಡಿದ್ದಾರೆ. ಪ್ರಸ್ತುತ ಆಸನೌ ಭಾರತಿ ಬಾಯಿರವರನ್ನು ಸಾಕ್ಷಿಯನ್ನಾಗಿ ಮಾಡಿ ಆರೋಪದಿಂದ ಕೈ ಬಿಡಲಾಗಿದೆ ಎಂಬ ವಿಷಯವನ್ನು ಒಪ್ಪಿಕೊಂಡಿದ್ದಾರೆ. ಮತ್ತು ತಮ್ಮ

ಪರವಾಗಿ ಸರ್ಕಾರಿ ಅಧಿಸೂಚನೆ ಸಂಖ್ಯೆ.ಮಮಇ. 128 ಎಸ್‌ಜೆಡಿ 2013 ದಿನಾಂಕ 12.03.2015 ಎಂದು ಗುರುತುಹಾಕಿಸಿಕೊಂಡಿದ್ದಾರೆ.

32. ಪ್ರಾಸ–2 ರವರು ನಿ.ಪಿ–6 ತನಿಖೆ ವರದಿಯನ್ನು ಗಮನಿಸಿದಾಗ ಆರೋಪಕ್ಕನುಗುಣವಾಗಿ ತನಿಖೆ ಕೈಗೊಂಡಿದ್ದು ಆಸನೌ ರವರು ಇಲಾಖೆಯ ವತಿಯಿಂದ ಉಸ್ತುವಾರಿ ಅಧಿಕಾರಿಗಳಾಗಿದ್ದು, ಎಲ್ಲಾ ಅಂಗನವಾಡಿ ಕೇಂದ್ರಗಳಿಗೂ ಭೇಟಿ ನೀಡಿ ಬೇಕಾಗುವ ಸವಲತ್ತುಗಳನ್ನು ಒದಗಿಸುವುದು ಮತ್ತು ಅಂಗನವಾಡಿ ಕೇಂದ್ರಗಳಿಂದ ಆಹಾರ ಬೇಡಿಕೆ ಪಟ್ಟಿಯನ್ನು ತರಿಸಿಕೊಂಡು ಸಿಡಿಪಿಓ ಕಚೇರಿಗೆ ಕಳುಹಿಸಿ ಬೇಡಿಕೆ ಅನುಸಾರ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ವಿತರಣೆ ಮಾಡಲಾಗುತ್ತದೆ ಮತ್ತು ಪೌಷ್ಟಿಕ ಆಹಾರ ಪದಾರ್ಥಗಳನ್ನು ಪ್ರತಿ ದಿನನೀಡಬೇಕಾಗಿದ್ದು ಅವರ ಕಾರ್ಯ ವ್ಯಾಪ್ತಿಯಲ್ಲಿ 110 ಅಂಗನವಾಡಿ ಕೇಂದ್ರಗಳು ಬರುತ್ತಿದ್ದು, ಅವುಗಳಿಗೆ ಮೇಲಿಂದ ಮೇಲೆ ಭೇಟಿ ನೀಡಿ ಪರಿಶೀಲಿಸಿ ಬೇಕಾಗುವ ಸವಲತ್ತುಗಳನ್ನು ಒದಗಿಸಲು ವಿಫಲರಾಗಿದ್ದಾರೆಂದು ಮತ್ತು ಇದರ ಪರಿಣಾಮವಾಗಿ ಸಿಡಿಪಿಓ ರುದ್ರೇಶ ಹಾಗೂ ಅಂಗನವಾಡಿ ಕಾರ್ಯಕರ್ತೆ ರಂಗಮ್ಮ ರವರು ಆಹಾರ ಪದಾರ್ಥ ಪೂರೈಕೆಗೆ ಆಸ್ಪದ ಮಾಡಿಕೊಟ್ಟಿದ್ದು ಕಂಡು ಬರುತ್ತಿದೆ ಎಂದು ವರದಿ ನೀಡಿರುತ್ತಾರೆ.

33. ಪ್ರಾ.ಸ–1 ಮತ್ತು ಪ್ರಾ.ಸ–2 ರವರ ಸಾಕ್ಷಿಗಳನ್ನು ಗಮನಿಸಿದಾಗ ಪ್ರಾ.ಸ–1 ಇವರಿಗೆ ವೈಯಕ್ತಿಕ ಹೊಸಳ್ಳಿಯ ಗ್ರಾಮದಲ್ಲಿರುವ ಅಂಗನವಾಡಿ ಕೇಂದ್ರದಲ್ಲಿಯ ಆಂತರಿಕ ಆಡಳಿತ ವ್ಯವಸ್ಥೆಯ ಬಗ್ಗೆ ಮತ್ತು ಕಾನೂನಾತ್ಮಕ ಪ್ರಕ್ರಿಯೆಗಳ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲದೇ ಇರುವುದು ಅವರ ಪಾಟೀ ಸವಾಲಿನಿಂದ ವ್ಯಕ್ತವಾಗುತ್ತದೆ. ಅಲ್ಲದೇ ಪ್ರಾ.ಸ–1 ರವರು ತಾವು ಹಾಜರು ಪಡಿಸಿದ ದಾಖಲೆ ನಿ.ಪಿ–1 ರಿಂದ ನಿ,.ಪಿ–4 ಇವುಗಳನ್ನು ಗಮನಿಸಿದಾಗ ಸದರಿಯವರು ಹಾಜರಾತಿ ಪುಸ್ತಕ ಮತ್ತು ದಾಸ್ತಾನು ವಿತರಣೆ ಪುಸ್ತಕಗಳನ್ನು ನಿ.ಪಿ–4 ರಲ್ಲಿ ಹಾಜರು ಪಡಿಸಿದ್ದಾರೆ ಮತ್ತು ಈ ದಾಖಲೆಗಳನ್ನು ಆರ್.ಟಿ.ಐ ಕಾಯ್ದೆಯಡಿಯಲ್ಲಿ ಪಡೆದಿದ್ದು ಕಂಡು ಬರುತ್ತಿದೆ. ಮಕ್ಕಳ ಹಾಜರಾತಿ ಪುಸ್ತಕಕ್ಕೂ ದಾಸ್ತಾನು ವಿತರಣಾ ಪುಸ್ತಕಗಳು ನಿ.ಪಿ–4 ರಲ್ಲಿದ್ದು ಮತ್ತು ಆಸನೌ ರವರು ತಮ್ಮ ರಕ್ಷಣಾತ್ಮಕ ತಕರಾರಿಗೆ ಅನುಗುಣವಾಗಿ ಕೂಡಾ ನಿ.ಡಿ–3 ರಲ್ಲಿ ಹಾಜರು ಪಡಿಸಿದ್ದಾರೆ.

34. ಪ್ರಾ.ಸ–2 ಇವರ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲನ್ನು ಗಮನಿಸಿದಾಗ ಇವರು ಖುದ್ದಾಗಿ ಹೆಚ್ಚುವರಿ ಮಾಹಿತಿಗಾಗಿ 2ನೇ ಸಲ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ

ಆಸನೌ ರವರನ್ನು ಮೌಖಿಕವಾಗಿ ವಿಚಾರಣೆ ಮಾಡಿ ತಮ್ಮ ವರದಿ ನಿ.ಪಿ-6 ರಲ್ಲಿ ಸಲ್ಲಿಸಿದ್ದು, ಅದರಲ್ಲಿ ಆಸನೌ ಇವರ ಮೇಲೆ ಇವರು ಮುಳಬಾಗಿಲು ತಾಲ್ಲೂಕಿನ ಮಕ್ಕಳ ಮತ್ತು ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಣಾ ಅಧಿಕಾರಿಗಳು ಆಗಿದ್ದು ಪ್ರತಿ ತಿಂಗಳು ಅಥವಾ ಸುತ್ತೋಲೆಗೆ ಅನುಗುಣವಾಗಿ ಭೇಟಿ ನೀಡಿ ಮೂರು ವರ್ಷಕ್ಕಿಂತ ಕಡಿಮೆ ಮಕ್ಕಳು, ಗರ್ಭಿಣಿ ಮತ್ತು ಬಾಣಂತಿಯರ ನೋಂದಾಯಿತ ಸಂಖ್ಯಾ ಪಟ್ಟಿಯನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳ ಅಂಕಿ ಸಂಖ್ಯೆಗಳ ಅನುಗುಣವಾಗಿ ಸಂಭಂದಿತ ಅಂಗನವಾಡಿ ಕಾರ್ಯಕರ್ತೆ ಮತ್ತು ಸಿಡಿಪಿಓ ಇವರಿಂದ ಬೇಡಿಕೆಗಳನ್ನು ಮತ್ತು ಲೆಕ್ಕ ಪತ್ರಗಳನ್ನು ಪಡೆದುಕೊಂಡು ಆಹಾರ ಮತ್ತು ದಾಸ್ತಾನನ್ನು ವಿತರಿಸಬೇಕಾಗಿದ್ದು ಅವರ ಜವಾಬ್ದಾರಿಯನ್ನು ಮತ್ತು ಮುಳಬಾಗಿಲು ತಾಲ್ಲೂಕಿನ ವ್ಯಾಪ್ತಿಗೆ ಬರುವ ಸುಮಾರು 110 ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಕಾಲಕಾಲಕ್ಕೆ ಪೂರೈಕೆ ಆದ ಪೌಷ್ಟಿಕ ಆಹಾರ ಪಟ್ಟಿಯನ್ನು ಪರಿಶೀಲಿಸಬೇಕಾಗಿದ್ದು ಕರ್ತವ್ಯ ಜವಾಬ್ದಾರಿಯಾಗಿದ್ದು, ಈ ಕ್ರಮಗಳನ್ನು ಕೈಗೊಳ್ಳದ ಕಾರಣ ಸಿಡಿಪಿಓ ಮತ್ತು ಅಂಗನವಾಡಿ ಕಾರ್ಯಕರ್ತೆ ರಂಗಮ್ಮ ಎನ್ನುವವರು ಆಹಾರ ಪದಾರ್ಥಗಳನ್ನು ಪೂರೈಸದೇ ದುರುಪಯೋಗವಾಗಿದ್ದು ಕಂಡು ಬಂದಿದೆ ಎಂದು ವರದಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಿ.ಪಿ-6 ನ್ನು ಕೂಲಂಕೂಷವಾಗಿ ಗಮನಿಸಿದಾಗ ಸದರಿ ಆಹಾರ ಪದಾರ್ಥಗಳ ದಾಸ್ತಾನು ಪೂರೈಕೆ ಆಸನೌ ರವರು ತಮ್ಮ ಸ್ವಂತ ಕಾನೂನು ಬಾಹಿರ ಕಾರಣಕ್ಕಾಗಿ ಯಾವುದೇ ದಾಸ್ತಾನನ್ನು ದುರುಪಯೋಗ ಮಾಡದೇ ಇರುವುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

35. ಆಸನೌ ರವರು ಅವರ ಮೇಲೆ ಮಾಡಿದ ಆರೋಪಕ್ಕೆ ಪ್ರತಿರಕ್ಷೆಯಾಗಿ ಖುದ್ದಾಗಿ ಡಿಡಬ್ಲ್ಯೂ-1 ಎಂದು ಸಾಕ್ಷ್ಯವನ್ನು ಪ್ರಮಾಣ ಪತ್ರದಲ್ಲಿ ಸಲ್ಲಿಸಿ ತಮ್ಮ ತಕರಾರಿಗೆ ಅನುಗುಣವಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿ ತಮ್ಮ ಕರ್ತವ್ಯದ ಜವಾಬ್ದಾರಿಗೆ ಅನುಗುಣವಾಗಿ ಸದರಿ ಹೊಸಳ್ಳಿಯ ಮತ್ತು ಇತರೆ ಅಂಗನವಾಡಿ ಕೇಂದ್ರಗಳಿಗೆ ನಿಯಮಿತ ಉಸ್ತುವಾರಿ ಭೇಟಿ ನೀಡಿದ್ದು ನಿಖರವಾಗಿ ಹೊಸಳ್ಳಿಯ ಅಂಗನವಾಡಿ ಕೇಂದ್ರಕ್ಕೆ ದಿ:14,02,2011, ದಿ:13.07.2011, ದಿ:08.08.2011, ದಿ:04.10.2011, ದಿ:05.12.2011, ದಿ:02.02.2011, ದಿ:21.03.2012 ರಂದು ನಿಯಮಿತವಾಗಿ ಪ್ರತಿ ತಿಂಗಳು ಭೇಟಿ ನೀಡಿ ಆಹಾರ ಪದಾರ್ಥ ದಾಸ್ತಾನು ಮತ್ತು ವಿತರಣಾ ನೋಂದಣಿ ಪುಸ್ತಕಗಳನ್ನು ಪರಿಶೀಲಿಸಿ ಸರ್ಕಾರದ ನಿರ್ದೇಶನದಂತೆ ಹೊಸಳ್ಳಿ ಅಂಗನವಾಡಿ ಕೇಂದ್ರ ಫಲಾನುಭವಿಗಳಿಗೆ ಪೌಷ್ಟಿಕ ಆಹಾರವನ್ನು ವಿತರಣೆ ಆಗುತ್ತಿದ್ದ ಬಗ್ಗೆ

ಖಚಿತಪಡಿಸಿಕೊಂಡಿದ್ದು ಪೂರಕ ದಾಖಲೆಗಳನ್ನು ಹಾಜರುಪಡಿಸಿದ್ದಾರೆಂದು ನುಡಿದಿದ್ದಾರೆ. ಮತ್ತು ಗ್ರಾಮದ ರಾಜಕೀಯದಲ್ಲಿ ಆಂತರಿಕ ದೋಷದಿಂದ ಪ್ರಾ.ಸ-1 ನಾಗರಾಜರವರ ಮುಖಾಂತರ ಅಂದಿನ ಅಂಗನವಾಡಿ ಕಾರ್ಯಕರ್ತೆ ರಂಗಮ್ಮ ಮತ್ತು ಸಿಡಿಪಿಓ ರುದ್ರೇಶ ರವರ ತಮ್ಮನ್ನೊಳಗೊಂಡು ದೂರು ನೀಡಿದ್ದು ಲೋಕಾಯುಕ್ತ ಕಚೇರಿಯಲ್ಲಿ ವಿಚಾರಣೆ ದಾಖಲಾಗಿದ್ದು ಆದರೆ ಲೋಕಾಯುಕ್ತ ಕಾಯ್ದೆ 12(3) ರಡಿಯಲ್ಲಿ ಸರ್ಕಾರ ಆದೇಶ ಸಂಖ್ಯೆಮಮಇ 128 ಎಸ್‌ಜೆಡಿ 2013 ಬೆಂಗಳೂರು ದಿನಾಂಕ 12.03.2015ರ ಅಧಿಸೂಚನೆ ಹೊರಡಿಸಿ ತಮ್ಮ ಮೇಲಿನ ವಿಚಾರಣಾ ಆದೇಶವನ್ನು ಹಿಂಪಡೆದಿದ್ದಾರೆ. ಅದಕ್ಕೆ ಪೂರಕವಾಗಿ ನಿ.ಡಿ-1 ನ್ನು ಗುರುತುಹಾಕಿಸಿಕೊಂಡಿದ್ದಾರೆ. 2008 ರಿಂದ 2012 ರವರೆಗೆ ಹೊಸಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದ ಮಕ್ಕಳ ಹಾಜರಿ ಪುಸ್ತಕ ನಿ.ಡಿ-2 ದಾಖಲೆಯನ್ನು ಗುರುತುಹಾಕಿಸಿಕೊಂಡಿದ್ದಾರೆ. 2008 ರಿಂದ 2012 ರವರೆಗೆ ಹೊಸಳ್ಳಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಪೂರೈಸಿದ ಆಹಾರ ಸಾಮಗ್ರಿ ದಾಸ್ತಾನು ವಿತರಣಾ ಪುಸ್ತಕದ ನಕಲು ಪ್ರತಿಯನ್ನು ನಿ.ಡಿ-3 ಎಂದು ದಾಖಲೆಯನ್ನು ಗುರುತು ಹಾಕಿಸಿಕೊಂಡಿದ್ದಾರೆ. 2008 ರಿಂದ 2012 ರವರೆಗೆ ಹೊಸಳ್ಳಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಗರ್ಭಿಣಿ, ಬಾಣಂತಿಯರ ಆಹಾರ ಪೂರೈಸಿದ ಆಹಾರ ಸಾಮಗ್ರಿ ದಾಸ್ತಾನು ವಿತರಣಾ ಪುಸ್ತಕದ ನಕಲು ಪ್ರತಿಯನ್ನು ನಿ.ಡಿ-4 ಎಂದು ದಾಖಲೆಯನ್ನು ಗುರುತು ಹಾಕಿಸಿಕೊಂಡಿದ್ದಾರೆ. 2010 ರಿಂದ 2016 ರವರೆಗೆ ಹೊಸಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದ ಸಿಬ್ಬಂದಿಯ ಹಾಜರಿ ಪುಸ್ತಕದ ನಕಲು ಪ್ರತಿಯನ್ನು ನಿ.ಡಿ-5 ಎಂದು ದಾಖಲೆಯನ್ನು ಗುರುತು ಹಾಕಿಸಿಕೊಂಡಿದ್ದಾರೆ.

36. ಪ್ರಾ.ಸ-1 ರವರು ದೂರು, ಅವರ ಮೌಖಿಕ ಸಾಕ್ಷ್ಯ, ಪ್ರಾ.ಸ-2 ರವರ ತನಿಖಾ ವರದಿ ಮತ್ತು ಆಸನೌ ರವರ ಸಾಕ್ಷಿ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಆಸನೌ ರವರು ಮುಳಬಾಗಿಲು ತಾಲ್ಲೂಕಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿಯಾಗಿ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸದ ಕಾರಣ ಅಂದಿನ ಸಿಡಿಪಿಓ (ಶಿಶು ಅಭಿವೃದ್ಧಿ ಯೋಜನಾಧಿಕಾರಿ) ಮತ್ತು ಅಂಗನವಾಡಿ ಕಾರ್ಯಕರ್ತೆ ರಂಗಮ್ಮ ರವರಿಗೆ ಬಾಣಂತಿಯರಿಗೂ ಮತ್ತು ಮಕ್ಕಳಿಗೆ ಆಹಾರ ಪದಾರ್ಥಗನ್ನು ಪೂರೈಸದೇ ದುರುಪಯೋಗ ಮಾಡಿಕೊಂಡಿರುವ ಆಸ್ಪದ ಹುಟ್ಟಿದೆ ಎಂಬುದನ್ನು ದಾಖಲೆಗಳನ್ನು ಪರಿಶೀಲಿಸಿ ನಿರ್ಧಾರಕ್ಕೆ ಬರಬೇಕಾಗಿದೆ.

37. ಪ್ರಾಥಮಿಕವಾಗಿ ಆಸನೌ ರವರ ಮೇಲೆ ಶಿಶುಕೇಂದ್ರಕ್ಕೆ ಪೂರೈಸಿದ ಆಹಾರ ಪದಾರ್ಥಗಳನ್ನು ಅಂಗನವಾಡಿ ಕೇಂದ್ರದ ಸಿಡಿಪಿಓ ಮತ್ತು ಅಂಗನವಾಡಿ ಕಾರ್ಯಕರ್ತೆ ಅವರೊಂದಿಗೆ ಶಾಮೀಲಾಗಿ ಬಾಣಂತಿಯರಿಗೂ ಮತ್ತು ಮಕ್ಕಳಿಗೆ ಆಹಾರ ಪದಾರ್ಥಗನ್ನು ಪೂರೈಸದೇ ದುರುಪಯೋಗ ಮಾಡಿಕೊಂಡು ಆರ್ಥಿಕ ಲಾಭ ಪಡೆದ ಯಾವುದೇ ಆರೋಪಗಳು ಇಲ್ಲ ಮತ್ತು ಸಾಕ್ಷ್ಯಗಳು ಕಂಡು ಬರುತ್ತಿಲ್ಲ.

38. ಆಸನೌ ರವರು ತಾವು ಕ್ರಮಬದ್ಧವಾಗಿ ಮತ್ತು ಜವಾಬ್ದಾರಿಯುತ ಇಲಾಖೆಯ ಮಕ್ಕಳ ಮತ್ತು ಕಲ್ಯಾಣ ಇಲಾಖೆಯ ಮೇಲ್ವಿಚಾರಕಿಯಾಗಿ ಕಾರ್ಯ ನಿರ್ವಹಿಸುವ ಬಗ್ಗೆ ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಮೂಲ ಆರೋಪದ ಪ್ರಶ್ನಾತೀತ ಮಕ್ಕಳ ಹಾಜರಾತಿ ಪುಸ್ತಕವನ್ನು ಹಾಜರು ಪಡಿಸಿ ನಿ.ಡಿ–2 ಎಂದು ಗುರುತುಹಾಕಿಸಿಕೊಂಡಿದ್ದಾರೆ. ಅದರಲ್ಲಿ ಶಿಶು ಕೇಂದ್ರಕ್ಕೆ ಮಕ್ಕಳ ಹಾಜರಾತಿ ಪುಸ್ತಕದಲ್ಲಿ 2008 ಅಕ್ಟೋಬರ್ ರಂದು ಗಮನಿಸಿದಾಗ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಒಂದು ವರ್ಷದಿಂದ 4 ವರ್ಷದವರೆಗೆನ ಮಕ್ಕಳ ಸುಮಾರು 1 ರಿಂದ 15ರವರೆಗೆ ಹಾಜರಿದ್ದಿದ್ದು ಕಂಡು ಬರುತ್ತಿದೆ. ನಿ.ಡಿ ಹಾಜರು ಪುಸ್ತಕ 2008 ಅಕ್ಟೋಬರ್ ತಿಂಗಳಿಂದ ಪ್ರಾರಂಭವಾಗಿ ಜೂನ್ 2012 ಕ್ಕೆ ಅಂತ್ಯಗೊಂಡಿದ್ದು ಬೇರೆ ಬೇರೆ ವರ್ಷ ತಿಂಗಳಲ್ಲಿ ಬೇರೆ ಬೇರೆ ಹೆಸರುಳ್ಳ 4 ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳು ಹಾಜರಿದ್ದಿದ್ದು ವ್ಯಕ್ತವಾಗುತ್ತಿದೆ.

39. ಅದೇ ರೀತಿ ನಿ.ಡಿ–3 ಆಹಾರ ಮತ್ತು ಸಾಮಗ್ರಿ ದಾಸ್ತಾಕ ವಿಸ್ತರಣಾ ಪುಸ್ತಕವನ್ನು ಗಮನಿಸಿದಾಗ ವಿವಿಧ ಟ್ರಾನ್ಸ್‌ಪೋರ್ಟ್ ಕಂಪನಿಯ ವಾಹನಗಳಿಂದ ಆಹಾರ ಸಾಮಗ್ರಿಗಳನ್ನು ಅಕ್ಟೋಬರ್ 2008 ರಿಮದ 2012 ರವರೆಗೆ ಹೊಸಳ್ಳಿ ಅಂಗನವಾಡಿ ಕೇಂದ್ರಕ್ಕೆ ಪೂರೈಸಿದ ಬಗ್ಗೆ ಮತ್ತು ಪದಾರ್ಥಗಳನ್ನು ಸ್ವೀಕರಿಸಿದ ಅಂದಿನ ಅಂಗನವಾಡಿ ಕಾರ್ಯಕರ್ತೆ ರಂಗಮ್ಮ ಇವರ ಹೆಸರು ಮತ್ತು ಸ್ವೀಕೃತ ಸಹಿಗಳು ಕಂಡು ಬರುತ್ತಿವೆ. 2008–2012 ರವರೆಗೆ ಆಹಾರ ಪದಾರ್ಥ ದಾಸ್ತಾನುಗಳಾದ ಎಣ್ಣೆ, ಬೆಲ್ಲ, ಈರುಳ್ಳಿ ಮೆಣಸಿನಕಾಯಿ ಹಾಗೂ ಪೌಷ್ಟಿಕ ಆಹಾರ ಪದಾರ್ಥಗಳು ಪೂರೈಕೆಯಾಗಿದ್ದು ವ್ಯಕ್ತವಾಗುತ್ತಿದೆ.

40. ಅದೇ ರೀತಿ ನಿ.ಡಿ–4 ಆಹಾರ ಮತ್ತು ಸಾಮಗ್ರಿ ದಾಸ್ತಾನು ವಿಸ್ತರಣಾ ಪುಸ್ತಕವನ್ನು ಗಮನಿಸಿದಾಗ ವಿವಿಧ ಟ್ರಾನ್ಸ್‌ಪೋರ್ಟ್ ಕಂಪನಿಯ ವಾಹನಗಳಿಂದ ಆಹಾರ ಸಾಮಗ್ರಿಗಳನ್ನು ಅಕ್ಟೋಬರ್ 2008 ರಿಂದ 2012 ರವರೆಗೆ ಬಾಣಂತಿಯರಿಗೆ

ಪೂರೈಸಬೇಕಾದ ಆಹಾರ ಪದಾರ್ಥ ಸಾಮಗ್ರಿಗಳನ್ನು ಫಲಾನುಭವಿಗಳಿಗೆ ಪೂರೈಸಿದ್ದು ಮತ್ತು ಸ್ವೀಕರಿಸಿದ ಬಾಣಂತಿಯರ ಸಹಿಗಳು ವ್ಯಕ್ತವಾಗುತ್ತಿದೆ.

41. ಅದೇ ರೀತಿ ನಿ.ಡಿ–5 ಕೆ.ಹೊಸಳ್ಳಿ ವಿಭಾಗಕ್ಕೆ ಅಂಗನವಾಡಿ ಕಾರ್ಯಕರ್ತೆ ರಂಗಮ್ಮ ಮತ್ತು ಸಿಡಿಪಿಓ ರುದ್ರೇಶ ಮತ್ತು ಆಸನ ರವರು ಹುದ್ದೆಯಲ್ಲಿದ್ದು ಅವರ ಸಿಬ್ಬಂದಿಯ ಹಾಜರಾತಿ ಪುಸ್ತಕ 2010 ರಿಂದ 2015 ರವರೆಗಿನ ದಾಖಲಾಗಿದ್ದು, ಇದರಲ್ಲಿ ಆಸನೌ ರವರು ಕರ್ತವ್ಯಕ್ಕೆ ಹಾಜರಿದ್ದ ಬಗ್ಗೆ ಹಾಜರಿ ವ್ಯಕ್ತವಾಗುತ್ತಿದೆ.

**42.** ಆಸನೌ ರವರ ಮೇಲೆ ಹೊಸಳ್ಳಿ ಶಿಶು ಕೇಂದ್ರಕ್ಕೆ ಪೌಷ್ಟಿಕ ಆಹಾರ ಪೂರೈಸಿದ ದಾಸ್ತಾನುಗಳ ಬಗ್ಗೆ ವೈಯಕ್ತಿಕ ಲಾಭಕ್ಕಾಗಿ ವಸ್ತುಗಳ ದುರ್ಬಳಕೆಯಾದ ಬಗ್ಗೆ ಆರೋಪ ಮಾಡಲಾಗಿಲ್ಲ. ಆದರೆ ಇವರು ನಿಯಮಿತವಾಗಿ ಇಲಾಖೆ ಸುತ್ತೋಲೆಗಳ ಅನ್ವಯ ಸಮಯ ಸಮಯಕ್ಕೆ ಸದರಿ ಹೊಸಳ್ಳಿ ಮಕ್ಕಳ ಮತ್ತು ಮಹಿಳಾ ಕೇಂದ್ರಕ್ಕೆ ಭೇಟಿ ನೀಡಿ ಪೂರೈಸಿದ ಪೌಷ್ಟಿಕ ಆಹಾರ ಸಾಮಗ್ರಿಗಳ ಪುಸ್ತಕ ಮತ್ತು ಫಲಾನುಭವಿಗಳ ಹಾಜರಾತಿ ಪುಸ್ತಕಗಳನ್ನು ಪರಿಶೀಲಿಸದ ಕಾರಣ ಅಂದಿನ ಸಿಡಿಪಿಓ ರುದ್ರೇಶ ಮತ್ತು ಶಿಶು ಕೇಂದ್ರದ ಕಾರ್ಯಕರ್ತೆ ರಂಗಮ್ಮ ದಾಸ್ತಾನುಗಳನ್ನು ದುರುಪಯೋಗ ಮಾಡಿಕೊಂಡಿದ್ದು ಆರೋಪ ಮಾಡಲಾಗಿತ್ತು. ಪ್ರಾ.ಸ–1 ರವರ ಮುಖಾಂತರ ಹಾಜರು ಪಡಿಸಲ್ಪಟ್ಟ ದಾಖಲೆಗಳನ್ನು ಮತ್ತು ಪ್ರಾ.ಸ–2 ತನಿಖಾಧಿಖಾರಿಗಳ ತನಿಖೆಯ ಸಂದರ್ಭದಲ್ಲಿ ಸ್ವತಃ ಆಸನೌ ರವರು ಕೆಲಸದ ಒತ್ತಡದಿಂದ ದಾಖಲೆಗಳನ್ನು ತಾಲ್ಲೂಕು ಕಚೇರಿಗೆ ಕಳುಹಿಸಿಲ್ಲ ಎಂದು ಅಲ್ಲದೇ ಆಹಾರ ಪೂರೈಕೆ ಮತ್ತು ಅದರ ಸದ್ಬಳಕೆಯ ಉಸ್ತುವಾರಿ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ ಎಂದು ಒಪ್ಪಿಕೊಂಡಿದ್ದನ್ನು ಗಮನಕ್ಕೆ ತೆಗದುಕೊಳ್ಳಲಾಗಿದೆ. ಕೇವಲ ಅಂದಿನ ಸಿಡಿಪಿಓ ರುದ್ರೇಶ ಮತ್ತು ಕಾರ್ಯಕರ್ತೆ ರಂಗಮ್ಮ ಇವರ ಮೇಲೆ ಇಲಾಖಾ ತನಿಖೆ ಕೈಗೊಳ್ಳಲಾಗಿದೆ. ಆದ್ದರಿಂದ ಆಸನೌ ರವರನ್ನು ಜವಾಬ್ದಾರಿಯಿಂದ ಮುಕ್ತ ಮಾಡಬಹುದು ಎಂಬ ಊಹೆಯನ್ನು ಗಮನಕ್ಕೆ ತೆಗೆದುಕೊಳ್ಳುವುದು ಸೂಕ್ತವಾಗುವುದಿಲ್ಲ. ಆಸನೌ ರವರು ತಾಲ್ಲೂಕು ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕಿ ಆಗಿದ್ದು ಇವರು ನಿಯಮಿತವಾಗಿ ಹಾಜರಿ ಪುಸ್ತಕಗಳನ್ನು ದಾಸ್ತಾನು ಪೂರೈಸಿದ ದಾಖಲೆಗಳನ್ನು ನಿಯಮಿತವಾಗಿ ಪರಿಶೀಲಿಸದ ಕಾರಣ ಅಂದಿನ ಸಿಡಿಪಿಓ ರುದ್ರೇಶ ಮತ್ತು ರಂಗಮ್ಮ ಎನ್ನುವವರು ಆಸನೌ ರವರ ಸದ್ಭಾವನೆ ಕರ್ತವ್ಯ ನಿರ್ವಹಣೆಯಲ್ಲಿ ಉದಾಸೀನತೆ ಮತ್ತು ಕರ್ತವ್ಯ ವಿಳಂಬ ನೀತಿ ತೋರಿಸಿದ ಕಾರಣ ಅಂದಿನ ಸಿಡಿಪಿಓ ಮತ್ತು

26/8

ಅಂಗನವಾಡಿ ಕಾರ್ಯಕರ್ತೆ ಲೋಕ ನೌಕರರಾಗಿ ದುರ್ನಡತೆವೆಸಗಲು ಆಸ್ಪದ ನೀಡಲಾಗಿದೆ ಎಂಬ ವಿಷಯವನ್ನು ಅಲ್ಲಗಳೆಯುವಂತಿಲ್ಲ. ಸದರಿ ಆಸನೌ ರವರ ವಿಳಂಬ ನೀತಿ ಕೂಡಾ ಅಂದಿನ ಸಿಡಿಪಿಓ ಮತ್ತು ಅಂಗನವಾಡಿ ಕಾರ್ಯಕರ್ತೆ ಮಕ್ಕಳ ಮತ್ತು ಬಾಣಂತಿಯರ ಪೌಷ್ಟಿಕ ಆಹಾರ ಪೂರೈಕೆಗೆ ಫಲಾನುಭವಿಗಳ ತಪ್ಪು ಸಂಖ್ಯೆಗಳನ್ನು ತೋರಿಸಿ ದಾಸ್ತಾನು ದುರ್ಬಳಕೆ ಮಾಡಿ ಸಂಯುಕ್ತವಾಗಿ ಮತ್ತು ಜಂಟಿಯಾಗಿ ಹೊಣೆಗಾರರಾಗಿರುವುದು ಕಂಡು ಬರುತ್ತಿದೆ. ಆಸನೌ ರವರ ನಕರಾತ್ಮಕ, ನಿರಾಶಾಧಾಯಕ ಕರ್ತವ್ಯ ನಿರ್ವಹಣೆಯ ಮನೋಪ್ರವೃತ್ತಿ ಅವರ ಲೋಕ ನೌಕರರಾಗಿ ದುರ್ನಡತೆ ವೆಸಗಿದ್ದಾರೆಂದು ನಿರ್ಧಾರಕ್ಕೆ ಬರದಿದ್ದರೂ ಸದರಿಯವರು ಕರ್ತವ್ಯಕ್ಕೆ ಚ್ಯೂತಿವೆಸಗಿದ್ದಾರೆಂದು ಗಮನಕ್ಕೆ ತೆಗೆದುಕೊಳ್ಳಲಾಗಿದೆ.

43. ಮೇಲೆ ವಿವರಿಸಿದ ಕಾರಣಗಳು ಮತ್ತು ಕೈಗೊಂಡ ವಿವರವಾದ ಚರ್ಚೆಯ ಆಧಾರದಲ್ಲಿ ಆಸನೌ ರವರ ವಿರುದ್ಧ ಮಾಡಿದ ಆಪಾದನೆಗಳನ್ನು ಶಿಸ್ತು ಪ್ರಾಧಿಕಾರವು ಸಾಬೀತುಪಡಿಸುವಲ್ಲಿ ಸಫಲವಾಗಿದೆ ಎಂದು ನಿರ್ಣಯಕ್ಕೆ ಬರುತ್ತಾ, ಮೇಲಿನ ಅಂಶ-1 ನ್ನು ಸಕರಾತ್ಮಕ ಎಂದು ಉತ್ತರಿಸಲಾಗಿದೆ.

44. **<u>ಅಂಶ-2:</u> ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ**

<u>:: ನಿರ್ಣಯ ::</u>

45. ಆಸನೌ ಶ್ರೀಮತಿ ಭಾರತಿ ಬಾಯಿ, ಅಂಗನವಾಡಿ ಮೇಲ್ವಿಚಾರಕಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ರವರ ಮೇಲೆ ಶ್ರೀ.ವಿ.ನಾಗರಾಜ ತಂದೆ ಶ್ರೀ.ವಿದ್ಯಾರಣ್ಯಪ್ಪ, ಮುದ್ದೇರಿ ಗ್ರಾಮ, ಕುಪ್ಪಂಪಾಳ್ಯ ಪೋಸ್ಟ್, ತಯಲೂರು ಹೋಬಳಿ, ಮುಳಬಗಿಲು ತಾಲ್ಲೂಕು, ಕೋಲಾರ ಜಿಲ್ಲೆ ರವರಿಂದ ಆಪಾದಿಸಲಾದ ಕರ್ತವ್ಯ ಲೋಪದ ಆರೋಪಗಳನ್ನು ಶಿಸ್ತು ಪ್ರಾಧಿಕಾರವು ಸಾಬೀಪಡಿಸಿದೆ ಎಂದು ನಿರ್ಧಾರಕ್ಕೆ ಬರುತ್ತಾ ಮೇಲಿನ ಅಂಶವನ್ನು ಸಕರಾತ್ಮಕವಾಗಿ ಉತ್ತರಿಸಲಾಗಿದೆ.

46. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರಿಗೆ ಮುಚ್ಚಿದ ಲಕೋಟೆಯಲ್ಲಿ ಗೌರವ ಪರಿಗಣನೆಗೆ ಸಲ್ಲಿಸಲು ಕಛೇರಿಗೆ ಆದೇಶಿಸಲಾಗಿದೆ.

26/8/22

(ರಾಜಶೇಖರ.ವಿ.ಪಾಟೀಲ)
ಅಪರ ನಿಬಂಧಕರು ವಿಚಾರಣೆಗಳು-8,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**INDEX**

| File No. | Particulars | | Page No. |
|---|---|---|---|
| File No.1 | Order Sheet file - original | | 1-32 |
| File No.2 | 1. 12(3) Report date: 23.07.2016 (xerox) | | 33-37 |
| | 2. Government Order date: 12.01.2017(xerox) | | 38-40 |
| | 3. Nomination Order date: 18.01.2017(xerox) | | 41-42 |
| | 4. Aknowledgement of P.I., Karnataka Lokayukta Kolar. | | 43 |
| | 5. Copy of Article of Charges date: 21.02.2017 served copy (original) | | 44-48 |
| | 6. FOS dated 20.03.2017 of DGO | | 49 |
| | 7. WS of DGO dated 21.11.2017. | | 50-52 |
| | 8. SOS dated 26.02.2021 of DGO | | 53 |
| | 9. Written argument of DGO dated 22.03.2022 | | 54-56 |
| File No.3 | **DEPOSITION OF DISCIPLINARY AUTHORITY** | | |
| | PW1 | Sri V.Nagaraj, S/o ViDhyaranyappa, Madderi village Mulabagilu Taluk, Kolar District. | 57-59 |

| | | | |
|---|---|---|---|
| | PW-2 | Sri Munikrushna, S/o Venkatesh, P.I., C.I.D., Bangalore. | 60-62 |
| File No.4 | **LIST OF DOCUMENTS MARKED ON BEHALF OF DISCIPLINARY AUTHORITY:** | | |
| | Ex.P1 | FORM NO.I (Complaint) | 63-64 |
| | Ex.P2 | FORM NO.II (Complainant's Affidavit) | 65 |
| | Ex.P3 | Letter dated 04.06.2012 of Complainant | 66 |
| | Ex.P4 | Letter dated 31.03.2012 of Complainant (Xerox copy) | 67-68 |
| | Ex.P5 | Enclosures (Xerox copy) | 69-232 |
| | Ex.P6 | Letter dated 09.06.2015 of Complainant . | 233-235 |
| | Ex.P7 | Letter dated 20.11.2015 of Police Inspector, KLA Kolar | 236-237 |
| File No.5 | **DEPOSITION OF DELINQUENT GOVERNMENT OFFICIAL** | | |
| | DW1 | Anganawadi Supervisor, Women and Child Development Department, Mulbagilu Taluk, Kolar District. (Affidavit) | 238-242 |
| | **LIST OF DOCUMENTS MARKED ON BEHALF OF DELINQUENT GOVERNMENT OFFICIAL** | | |
| File No.6 | Ex.D1 | Government Order Dated.12.03.2015 | 243-244 |
| | Ex.D2 | Xerox copies of attendance book 2008- June-2012 | 245-293 |

| | | | |
|---|---|---|---|
| | Ex.D3 | Xerox copies of Food items storage and distribution book October 2008-June-2012 | 294-483 |

26/8/2022

(RAJASHEKAR.V.PATIL)
Additional Registrar Enquiries-8
Karnataka Lokayukta,
Bengaluru.

GOVERNMENT OF KARNATAKA

KARNATAKA LOKAYUKTA

No.UPLOK-2/DE/75/2017/ARE-8

Multi Storied Building,
Dr. B.R. Ambedkar Veedhi,
Bengaluru-560001
Date: 29th August, 2022.

## RECOMMENDATION

Sub: Departmental Inquiry against Smt. Bharathi Bai, Anganawadi Supervisor, Women and Child Development Department, Mulbagilu Taluk, Kolar District-reg.,

Ref: 1) Government Order No.ಮಮಇ 301 ಐಸ್‌ಜಿಡಿ 2016, Bengaluru, dated: 12/01/2017.

2) Nomination Order No.UPLOK-2/DE/75/2017, Bengaluru, dated: 18/01/2017 of Upalokayukta, State of Karnataka, Bengaluru.

3) Inquiry Report dated: 26/08/2022 of Additional Registrar of Enquiries-8, Karnataka Lokayukta, Bengaluru.

*****

The Government by its order dated: 12/01/2017 initiated the disciplinary proceedings against Smt. Bharathi Bai, Anganawadi Supervisor, Women and Child Development Department, Mulbagilu Taluk, Kolar District (hereinafter

referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-2/DE/75/ 2017, Bengaluru, dated: 18/01/2017 nominated Additional Registrar of Enquiries-8, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by her.

3. The DGO, Smt. Bharathi Bai, Anganawadi Supervisor, Women and Child Development Department, Mulbagilu Taluk, Kolar District was tried for the following charges:

**ANNEXURE No.I**
**CHARGE**

That, you-DGO while working as Supervisor in the office of Child Development Project Office at Mulabagilu in Kolar failed to visit and inspect Anganwadi centres coming within the jurisdiction and monitor proper use of nutritious food products supplied for the benefit of the children attending anganwadi centres and thereby you-DGO have failed to maintain absolute integrity and devotion to duty, the act of which is unbecoming of public/Government Servant and thereby you-DGO have committed misconduct as enumerated under Rule 3(1)(i), (ii) and (iii) of Karnataka Civil Services(Conduct) Rules, 1966

4. The Inquiry Officer (Additional Registrar of Enquiries-8) on proper appreciation of oral and documentary evidence has held that, the Disciplinary Authority has 'Proved' the charges leveled against DGO, Smt. Bharathi Bai, Anganawadi Supervisor, Women and Child Development Department, Mulbagilu Taluk, Kolar District.

5. On perusal of the Inquiry Report, in order to prove the guilt of the DGO, the Disciplinary Authority has examined two witnesses i.e., PW-1 and PW-2 and Ex. P-1 to P-7 documents were got marked. In fact, DGO was also examined herself as DW-1 and Ex. D-1 to D-3 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the First Oral Statement of DGO furnished by the Inquiry Officer, DGO, Smt. Bharathi Bai will retire from service on 31/05/2028.

8. Having regard to the nature of charge 'Proved' against DGO, Smt. Bharathi Bai, Anganawadi Supervisor, Women and Child Development Department, Mulbagilu Taluk, Kolar District and on consideration of the totality of circumstances:-

> "It is hereby recommended to the Government to impose penalty of withholding one annual increment payable to DGO, Smt. Bharathi Bai, Anganawadi Supervisor, Women and Child Development Department, Mulbagilu Taluk, Kolar District with cumulative effect".

9. Action taken in the matter shall be intimated to this Authority.

Connected records are enclosed herewith.

29/8/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.